## ನಿಮ್ಮೊಡನೆ

# ನಮ್ಮ ಮಕ್ಕಳು ಓದಲೇಬೇಕಾದ ಮಳೆ-ಬಿಸಿಲಿನ ಪ್ರಾಕೃತಿಕ ಪಠ್ಯಗಳು

**ಯಾವುದನ್ನು ಕಲಿಯಬೇಕು ಎನ್ನುವುದರಷ್ಟೇ ಯಾವುದನ್ನು ಕಲಿಯಬಾರದು ಎನ್ನುವುದೂ ಮುಖ್ಯ. ಈ ಆಯ್ಕೆಯ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸುವ ಕೆಲಸದಲ್ಲಿ ಪೋಷಕರೂ ತೊಡಗಿಕೊಳ್ಳಲೇಬೇಕಾಗಿರುವ ವಿಷಮ ಸನ್ನಿವೇಶ ಇಂದಿನದು.**

ಶಾಲಾಮಕ್ಕಳು ಓದಬೇಕಾದ ಪಠ್ಯಪುಸ್ತಕಗಳಿಗೆ ರಾಜಕಾರಣದ ಸೋಂಕು ತಗುಲಿರುವ ಸಂದರ್ಭದಲ್ಲಿ, ನಮ್ಮ ಮಕ್ಕಳು ನಿಜವಾಗಿಯೂ ಅರಿಯಬೇಕಾದುದು, ಕಲಿಯಬೇಕಾದುದು ಯಾವುದು ಎನ್ನುವುದನ್ನು ಪ್ರಕೃತಿಯೇ ಸೂಚಿಸುವಂತಿದೆ. ಮುಂಗಾರಿಗೆ ಮುನ್ನವೇ ಧಾರಾಕಾರ ಸುರಿದು, ಹಲವರ ನೆಮ್ಮದಿಯನ್ನು ಕಸಿದುಕೊಂಡಿರುವ ಮಳೆಯಲ್ಲಿ ಹಾಗೂ ದೇಶವನ್ನು ಕಂಗಾಲಾಗಿಸಿದ ಬಿಸಿಲಝಳದ ತೀವ್ರತೆಯಲ್ಲಿ ಕಿರಿಯರು ಗಮನಿಸಲೇಬೇಕಾದ ಹಲವು ಪಾಠಗಳಿವೆ.

ಆಡಳಿತಯಂತ್ರ ಸಂವೇದನೆಯನ್ನು ಕಳೆದುಕೊಂಡಿರುವುದನ್ನು, ಅಧಿಕಾರಿಗಳು ಮತ್ತು ರಾಜಕಾರಣಿಗಳ ಭ್ರಷ್ಟತೆ ಮಿತಿಮೀರಿರುವುದನ್ನು ಇತ್ತೀಚೆಗೆ ಸುರಿದ ಮಳೆಯ ಪರಿಣಾಮಗಳು ಜನರ ಮುಂದೆ ಮತ್ತೊಮ್ಮೆ ಅನಾವರಣಗೊಳಿಸಿವೆ. ಬೆಂಗಳೂರಿನಲ್ಲಿ ಪ್ರತಿ ಮಳೆಗಾಲದಲ್ಲಿ ತಗ್ಗುಪ್ರದೇಶಗಳಿಗೆ ನೀರುನುಗ್ಗುತ್ತದೆ. ಮನೆಗಳಿಗೆ ನೀರುನುಗ್ಗಿದಾಗ ಕಾರ್ಯಪ್ರವೃತ್ತವಾಗುವ ಮಹಾನಗರ ಪಾಲಿಕೆ ಅಧಿಕಾರಿಗಳು, ರಾಜಕಾಲುವೆಗಳ ಹೂಳು ತೆಗೆಸುವ ಮತ್ತು ಚರಂಡಿಗಳನ್ನು ಸ್ವಚ್ಛಗೊಳಿಸುವ ನಾಟಕ ಮಾಡುತ್ತಾರೆ. ಸಮಸ್ಯೆ ಸೃಷ್ಟಿಯಾದ ನಂತರ ಉತ್ತರ ಹುಡುಕುವ ಅಧಿಕಾರಿವರ್ಗಕ್ಕೆ, ಸಮಸ್ಯೆ ಸೃಷ್ಟಿಯಾಗದಂತೆ ನೋಡಿಕೊಳ್ಳುವುದರ ಬಗ್ಗೆ ಆಸಕ್ತಿಯಿಲ್ಲ. ಜನಸಾಮಾನ್ಯರು ಕಣ್ಣೀರಿನಲ್ಲಿ ಕೈತೊಳೆದರೂ ರಾಜಕಾಲುವೆಗಳ ಒತ್ತುವರಿಯನ್ನು ಸರಿಪಡಿಸುವ ಗೋಜಿಗೆ ಅಧಿಕಾರಿಗಳಾಗಲೀ ರಾಜಕಾರಣಿಗಳಾಗಲೀ ಹೋಗುವುದಿಲ್ಲ. ಅವರ ದರ್ಪ ನಡೆಯುವುದೇನಿದ್ದರೂ ಜನಸಾಮಾನ್ಯರ ಬಳಿಯಷ್ಟೇ. ‘ತಗ್ಗುಪ್ರದೇಶಗಳಿಗೆ ನೀರು ನುಗ್ಗುವುದು ಸಹಜ’ ಎಂದು ಮುಖ್ಯಮಂತ್ರಿಗಳೇ ಗಿಳಿಪಾಠ ಒಪ್ಪಿಸುತ್ತಾರೆ. ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ ಎನ್ನುವಂತೆ, ಅಧಿಕಾರ ಮತ್ತು ಹಣವಿರುವಲ್ಲಿ ಭ್ರಷ್ಟಾಚಾರವೂ ಸಹಜ ಎಂದು ಮತ್ತೊಬ್ಬರು ಹೇಳಿದರೆ ಅದರಲ್ಲಿ ಅಸಹಜವೇನೂ ಇಲ್ಲ.

ಆಡಳಿತಯಂತ್ರದ ಮೇಲೆ ಗೂಬೆ ಕೂರಿಸಿ ಜನಸಾಮಾನ್ಯರು ಸುಮ್ಮನಿರುವಂತಿಲ್ಲ. ಸಮಾಜದ ನೈತಿಕತೆಯ ಅವಲೋಕನಕ್ಕೂ ಮಳೆ ಒತ್ತಾಯಿಸುತ್ತಿದೆ. ನೀರು ನಿಲ್ಲುವ ಮತ್ತು ಹರಿಯುವ ಜಾಗಗಳಲ್ಲಿ ಮನೆಗಳು ನಿರ್ಮಾಣವಾದಾಗ ಮಳೆಯ ನೀರು ಎಲ್ಲಿಗೆ ಹೋಗಬೇಕು ಎನ್ನುವ ಪ್ರಶ್ನೆಗೆ ನಾವೇ ಉತ್ತರಿಸಬೇಕಾಗಿದೆ. ಅಕ್ರಮ ಕಟ್ಟಡಗಳ ನಿರ್ಮಾಣದಲ್ಲಿ ಭ್ರಷ್ಟ ಅಧಿಕಾರಿಗಳ ಪಾತ್ರವಿರುವಂತೆಯೇ ಆಸೆಬುರುಕ ಸಾರ್ವಜನಿಕರ ಪಾತ್ರವೂ ಇರುತ್ತದೆ. ಕಸವನ್ನು ಸರಿಯಾಗಿ ವಿಲೇವಾರಿ ಮಾಡದೆ, ನೀರು ಹರಿಯುವ ಚರಂಡಿಗಳನ್ನು ತಿಪ್ಪೆಗಳಾಗಿಸಿದ್ದೇವೆ. ಪರಿಣಾಮ ಮಳೆನೀರು ಸರಾಗವಾಗಿ ಹರಿಯದೆ, ರಸ್ತೆಗಳಲ್ಲಿ ಉಕ್ಕಿ ಮನೆಗಳತ್ತ ಮುಖ ಮಾಡುವಂತಾಗುತ್ತದೆ.

ಗಮನಿಸಲೇಬೇಕಾದ ಮತ್ತೊಂದು ವಿದ್ಯಮಾನ, ಮಳೆಚಕ್ರದಲ್ಲಿ ಉಂಟಾಗಿರುವ ವ್ಯತ್ಯಾಸ. ನಿಯಮಿತವಾಗಿ ಸುರಿಯುವ ಬದಲು, ಅತಿವೃಷ್ಟಿ ಇಲ್ಲವೇ ಅನಾವೃಷ್ಟಿಯೇ ಮಳೆಯ ಲಕ್ಷಣ ಎನ್ನುವಂತಾಗಿದೆ. ಭೂಮಿಯ ತಾಪಮಾನ ಏರುತ್ತಲೇ ಇದೆ. ಈ ಬದಲಾವಣೆಗಳಿಗೂ ಪರಿಸರದಲ್ಲಿ ಉಂಟಾಗಿರುವ ಏರುಪೇರಿಗೂ ಸಂಬಂಧವಿದೆ ಎಂದು ವಿಜ್ಞಾನಿಗಳು ನಿರಂತರವಾಗಿ ಎಚ್ಚರಿಸುತ್ತಲೇ ಇದ್ದಾರೆ. ಆ ಎಚ್ಚರಿಕೆಗಳನ್ನು ಸರ್ಕಾರಗಳೂ ಗಂಭೀರವಾಗಿ ಪರಿಗಣಿಸುತ್ತಿಲ್ಲ, ಜನರೂ ತಲೆಕೆಡಿಸಿಕೊಳ್ಳುತ್ತಿಲ್ಲ.

ಮಳೆ ಮಾತ್ರವಲ್ಲ, ಬಿಸಿಲಿನ ತೀವ್ರತೆಯೂ ಪರಿಸರದ ಆರೋಗ್ಯ ಕೆಟ್ಟಿರುವುದರ ಪರಿಣಾಮವೇ. ದೇಶದ ಮಹಾನಗರಗಳೆಲ್ಲ ಕಾವಲಿಯ ಸ್ವರೂಪ ಪಡೆದುಕೊಂಡಿವೆ. ಈ ಬೇಸಗೆಯಲ್ಲಿ ದೆಹಲಿಯಲ್ಲಿನ ಗರಿಷ್ಠ ತಾಪಮಾನದ ಮುಳ್ಳು 50 ಡಿಗ್ರಿ ಸೆಲ್ಸಿಯಸ್‌ಗೆ ತಾಕುವಂತಿತ್ತು. ಬೆಂಗಳೂರು ತನ್ನ ತಂಪು ಹವೆಯ ಗುಣವನ್ನು ಕಳೆದುಕೊಂಡು ಅನೇಕ ವರ್ಷಗಳಾದವು. ಇಲ್ಲೀಗ, ಮಳೆ ಸುರಿಯದ ದಿನಗಳೆಲ್ಲವೂ ಬೇಸಗೆಯ ಅನುಭವವನ್ನೇ ನೀಡುತ್ತಿವೆ. ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡಗಳು ಪ್ರತಿ ವರ್ಷ ಪ್ರವಾಹದ ಭೀತಿಯನ್ನೂ ಮಣ್ಣಿನ ಸವಕಳಿಯನ್ನೂ ಎದುರಿಸುತ್ತಿವೆ. ನಾಗರಿಕ ರಚನೆಗಳು ಇಸ್ಪೀಟಿನ ಎಲೆಗಳ ಗೋಪುರದಂತೆ ಕುಸಿದುಬೀಳುವುದನ್ನು ನಿಸ್ಸಹಾಯಕರಾಗಿ ನೋಡುತ್ತಿದ್ದೇವೆ.

ರಾಜಕಾರಣಿಗಳು ಪರಿಸರ ಸಂರಕ್ಷಕರಾಗಿ ಸಮಾಜಕ್ಕೆ ಮಾದರಿಯಾಗಬೇಕಿತ್ತು. ಆದರೆ ಅವರು ಧರ್ಮಸಂರಕ್ಷಕರ ವೇಷಧಾರಿಗಳಾಗಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಪರಿಸರ ಮತ್ತು ಸಮಾಜದ ಪಾಲಿಗೆ ಉಳಿದಿರುವ ಬೆಳ್ಳಿಚುಕ್ಕಿಗಳು ಮಕ್ಕಳಷ್ಟೇ. ಆ ಮಕ್ಕಳನ್ನೂ ಮತ–ಧರ್ಮದ ಹೆಸರಿನಲ್ಲಿ ವಿಭಜಿಸುವ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳನ್ನೂ ಸಾಮಾಜಿಕ ಪಠ್ಯಗಳ ರೂಪದಲ್ಲಿ ಮಕ್ಕಳು ಗಮನಿಸಬೇಕು. ಯಾವುದನ್ನು ಕಲಿಯಬೇಕು ಎನ್ನುವುದರಷ್ಟೇ ಯಾವುದನ್ನು ಕಲಿಯಬಾರದು ಎನ್ನುವುದೂ ಮುಖ್ಯ. ಈ ಆಯ್ಕೆಯ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸುವ ಕೆಲಸದಲ್ಲಿ ಪೋಷಕರೂ ತೊಡಗಿಕೊಳ್ಳಲೇಬೇಕಾಗಿರುವ ವಿಷಮ ಸನ್ನಿವೇಶ ಇಂದಿನದು. ಶಾಲಾಚೌಕಟ್ಟಿನ ಹೊರಗೆ ಪ್ರಕೃತಿಯೇ ಕಾಣಿಸುವ ಪಾಠಗಳನ್ನು ಮಕ್ಕಳಿಗೆ ತಿಳಿಸುವ ಹೊಣೆಗಾರಿಕೆ ಪೋಷಕರದೇ ಆಗಿದೆ. ಮಕ್ಕಳನ್ನು ಜವಾಬ್ದಾರಿಯುತ ನಾಗರಿಕನ್ನಾಗಿಸುವಲ್ಲಿ ಶಿಕ್ಷಕವೃಂದ ಎಲ್ಲರನ್ನೂ ಸಮಾನವಾಗಿ ಕಾಣುವ ತಾಯಿಗುಣವನ್ನು ಮೈಗೂಡಿಸಿಕೊಳ್ಳಬೇಕಾಗಿದೆ.

■ **ರಘುನಾಥ ಚ.ಹ.**

